International Journal of Kannada Research
www.kannadajournal.com

**ISSN: 2454–5813**
IJKR 2021; 7(4): 27-30
© 2021 IJKR
www.kannadajournal.com
Received: 24-06-2021
Accepted: 13-08-2021

**ಡಾ.ತಿಪ್ಪೇಸ್ವಾಮಿ ಡಿ.ಎಸ್**
ಸಹ ಪ್ರಾಧ್ಯಾಪಕರು,
ವಿಎಂಎಸ್ಆರ್ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು,
ವಿಎಸ್ ಬೆಲಿಹಾರ, ಹುಂಗುಂಡ,
ಬಾಗಲಕೋಟೆ, ಕರ್ನಾಟಕ,
ಭಾರತ

**Corresponding Author:**
**ಡಾ.ತಿಪ್ಪೇಸ್ವಾಮಿ ಡಿ.ಎಸ್.**
ಸಹ ಪ್ರಾಧ್ಯಾಪಕರು,
ವಿಎಂಎಸ್ಆರ್ ಕಲಾ,
ವಿಜ್ಞಾನ ಮತ್ತು ವಾಣಿಜ್ಯ
ಕಾಲೇಜು, ವಿಎಸ್ ಬೆಲಿಹಾರ,
ಹುಂಗುಂಡ, ಬಾಗಲಕೋಟೆ,
ಕರ್ನಾಟಕ, ಭಾರತ

# ಸತ್ಯಾನಂದ ಪಾತ್ರೋಟರ ಕವಿತೆಗಳಲ್ಲಿ ನವಜೀವನ

**ಡಾ.ತಿಪ್ಪೇಸ್ವಾಮಿ ಡಿ.ಎಸ್.**

ಆಧುನಿಕ ಕನ್ನಡ ಸಾಹಿತ್ಯವು ವಸಾಹತುಶಾಹಿ ಅನುಭವಗಳಿಗೆ ಒಡ್ಡಿಕೊಂಡು, ವಿಭಿನ್ನ ಕಾಣ್ಕೆಗಳನ್ನು ಪಡೆದು ಹೊಸ ಹೊಸ ಸೃಜನಸಾಧ್ಯತೆಗಳಲ್ಲಿ ಬೆಳೆದು ಬಂದಿತಷ್ಟೆ. ಕೇವಲ ಆ ಅನುಭವಗಳನ್ನು ಆತಂಕ, ತಲ್ಲಣಗಳ ಮಟ್ಟಿಗೆ ಗ್ರಹಿಸುವುದು ಸರಿಯಾದುದಲ್ಲ. ಆಧುನಿಕತೆಯ ಪ್ರವೇಶ, ಸಾರ್ವತ್ರಿಕವಾದ ಸಾಕ್ಷರತೆ, ಆರಂಭಗೊಂಡ ಬೃಹತ್ ಕೈಗಾರಿಕೆಗಳು, ಹೊಸ ವರ್ಗಗಳ ಉದಯ, ಸಮಾನತೆಗಾಗಿ ಹಂಬಲ, ಸಾಂಪ್ರದಾಯಿಕ ಜೀವನ ವಿಧಾನ ಮತ್ತು ಆಲೋಚನೆಗಳಿಗೆ ಬಿದ್ದ ಏಟು– ಹೀಗೆ ಕಾಣಿಸಿಕೊಂಡ ಹತ್ತಾರು ಬದಲಾವಣೆಗಳು, ಬೆಳವಣಿಗೆಗಳು ಸೃಜನಶೀಲತೆಯನ್ನು ಗಾಢವಾಗಿ ಪ್ರಭಾವಿಸಿದವು. ಕಾವ್ಯಲೋಕದ ವಸ್ತು– ವಿಷಯಗಳು, ಆಶಯಗಳು ಹೊಸ ದಿಕ್ಕಿನ ಶೋಧಕ್ಕೆ ತೊಡಗಿದವು.
ಜಾಗತಿಕ ಸಾಹಿತ್ಯದಲ್ಲಿ ಪ್ರತಿಭಟನೆಗೆ ಸ್ಥಾನವಿದ್ದೇ ಇದೆ. ಈ ಪ್ರತಿಭಟನೆ ಅಕ್ಷರಗಳ ರೂಪದಲ್ಲಿ ಬರಬಹುದು ಅಥವಾ ಕೃತಿಗಳ ರೂಪದಲ್ಲಿ ಬರಬಹುದು. ಜಗತ್ತಿನ ಬೇರೆಡೆಗೂ ಶೋಷಿತ ಜನಾಂಗ ಶೋಷಕರ ವಿರುದ್ಧ ಆಗಾಗ ಪ್ರತಿಭಟನೆಯನ್ನು ಮಾಡುತ್ತಲೇ ಇರುತ್ತಾರೆ. ಪ್ರತಿಭಟನಾಕಾರರಿಗೆ ಸ್ಫೂರ್ತಿ ತುಂಬಲು ಕಾಲಕಾಲಕ್ಕೆ ಅಂತಹ ಸಾಹಿತ್ಯ ನಿರ್ಮಾಣವಾಗುತ್ತಲೇ ಇರುತ್ತದೆ. ಸಾಹಿತ್ಯದಲ್ಲಿ ಶೋಷಿತರ ನೋವು ದು:ಖ ದುಮ್ಮಾನಗಳನ್ನು ನೆನೆಸುವುದರ ಜೊತೆಗೆ ಅದನ್ನು ನಿವಾರಿಸುವ ದಾರಿಯನ್ನು ಕಾಣಲು ಯತ್ನಿಸಲಾಗುತ್ತದೆ. ಆ ನಿಟ್ಟಿನಲ್ಲಿ ನೋಡಿದರೆ ಕನ್ನಡ ಮತ್ತು ಮರಾಠಿಯ ದಲಿತ ಸಾಹಿತ್ಯ ಜಾಗತಿಕ ಪ್ರತಿಭಟನೆಯ ಸಾಹಿತ್ಯಕ್ಕೆ ಸಮವೆಂದು ಹೇಳಬಹುದು.
ಬಂಡಾಯ ಸಂಘಟನೆಯಲ್ಲಿ ತೊಡಗಿಸಿಕೊಂಡು 'ಕರಿನೆಲದ ಕಲೆಗಳು' ಕವನ ಸಂಕಲನದಿಂದ 'ಕರಿಯ ಕಟ್ಟಿದ ಕವನ' ಸಂಕಲನದವರೆಗೆ ಹತ್ತಕ್ಕೂ ಹೆಚ್ಚು ಕವನ ಸಂಕಲನಗಳನ್ನು ಕನ್ನಡ ಸಾಹಿತ್ಯಕ್ಕೆ ಕೊಟ್ಟ ಸತ್ಯಾನಂದ ಪಾತ್ರೋಟರ ದಲಿತ ಸಂವೇದನೆ, ಜಾಜಿಮಲ್ಲಿಗೆಯ ಕಂಪು ಪ್ರೀತಿ, ಪರಿಸರದ ಬಗೆಗಿನ ಒಲವುಗಳನ್ನು ಈ ಸಂಕಲನಗಳಲ್ಲಿ ವ್ಯಕ್ತಪಡಿಸಿದ್ದಾರೆ.
ಜಾಜಿ ಮಲ್ಲಿಗೆಯ ಏಕಕಾಲಕ್ಕೆ ಕಲಾತ್ಮಕತೆ, ಬಂಡಾಯ ಧ್ವನಿಗಳನ್ನು ಬದುಕು– ಪ್ರಕೃತಿಗಳನ್ನು ಒಳಗೊಂಡ ಚೊಕ್ಕಟದ ಕವಿತೆ. ಅನುಭವದ ಗ್ರಹಿಕೆ ಮತ್ತು ಆಲೋಚನಾ ವಿಧಾನದ ವಿಶಿಷ್ಟ ನೆಲೆಯಿಂದ ಅಭಿವ್ಯಕ್ತಿಗೆ ಹೊಸ ಆಯಾಮ ಒದಗಿಸುತ್ತಿರುವ ಸತ್ಯಾನಂದರ ಕವನ ಸಂಕಲನವು ಒಂದು ಸಮರ್ಥ ಸೇರ್ಪಡೆಯಾಗಿದೆ ಎಂದು ಅಭಿಪ್ರಾಯಪಡುವುದು ಈ ಸಂಕಲನಕ್ಕೆ ಸಿಕ್ಕಿಸಿದ ಗರಿಯಾಗಿದೆ.

> ಪುಟ್ಟಗುಡಿಸಲಿನಲ್ಲಿ ಕೆಟ್ಟ ಕನಸುಗಳಿಲ್ಲ
> ಮನಸ್ಸು ಕನಸುಗಳಿಲ್ಲಿ ಜಾಜಿ ಮಲ್ಲಿಗೆ
> ಸತ್ತ ನತಗಳ ಸುತ್ತ ಹಸಿದ ಹಾವುಗಳಿಲ್ಲ
> ಟೊಂಗೆ ಟೊಂಗೆಯ ತುಂಬ ಬಿರಿವ ಮೊಗ್ಗೆ

ಇಡೀ ಕವಿತೆ ಚುರುಕಾದ ನಡುಗೆ ಹೊಂದಿದ್ದು, ಅರ್ಥ, ಭಾವ ಧ್ವನಿಗಳ ತೀವ್ರತೆಯಿಂದ ಕುಸುರಿಗೆಲಸದ ಶಿಲ್ಪದಂತಿದೆ. ಉದ್ದಕ್ಕೂ ಪ್ರಕೃತಿಯ ಸಮೃದ್ಧಿ ಚೆಲುವುಗಳು, ದುಡಿಯುವ ಬಡಜನರಿಗೆ ಪರ್ಯಾಯವಾಗುತ್ತವೆ. ಟೊಂಗೆಯ ತುಂಬ ಬಿರಿವ ಮೊಗ್ಗೆಗಳ ಕಲ್ಪನೆ, ಸೂರ್ಯನೊಂದಿಗೆ ನಗುನಗುತ್ತ ನಡೆವ ಜನ, ಅವರ ಕಂಗಳಲ್ಲಿ ಸೂಸುವ ಬೆಳದಿಂಗಳು, ಅವರಲ್ಲಿ ಭುವಿಯ ಸಹನೆಯೇ ಮಡುಗಟ್ಟಿದ್ದು, ಮುನಿಸಿಲ್ಲದ, ಬದುಕಲ್ಲಿ ಬೆಲ್ಲ ಕಾಣದ, ಲೋಕಕಲ್ಯಾಣಾರ್ಥದ ಜಾಜಿಮಲ್ಲಿಗೆ– ಜನ ಗುಡಿಸಲವಾಸಿಗಳ ದುಡಿವ ಬರ್ಗದ ಅಪ್ರತಿಮ ಚಿತ್ರಣವಿದು.

ಗುಡಿಸಲಗಳ ಬಡವರೂ, ಪ್ರಕೃತಿಯ ಜಾಜಿ ಮಲ್ಲಿಗೆಯೂ ಪರಸ್ಪರ ಸಮರ್ಥಿತವಾಗುವ ಈ ಕವಿತೆಯಲ್ಲಿ ಕೊನೆಗೆ ವ್ಯವಸ್ಥೆಯೇ ವಿಡಂಬನಗೊಳ್ಳುತ್ತದೆ.

ಬಲವೆನ್ನುವುದು ಜಾತಿ, ಧರ್ಮ, ವರ್ಗ, ವರ್ಣವೆಲ್ಲವನ್ನು ಮೀರಿದ್ದು, ಆದರೆ ಇಂದಿನ ದಿನಗಳಲ್ಲಿ ಇವುಗಳೇ ಪ್ರಮುಖವಾಗಿದೆ ಎನ್ನುವುದಕ್ಕೆ ಕಳೆದು ಹೋದ ಒಲವು ಇಂಥ ಕಟ್ಟಳೆಯ ಒಳಗೆ ಸಿಲುಕಿಕೊಂಡಿದೆ ಎಂದು ಹೀಗೆ ಹೇಳುತ್ತಾರೆ.

ನಾನು ಪ್ರೀತಿಸಿದ ಹುಡುಗಿ
ಕಳೆದು ಹೋಗಿದ್ದಾಳೆ
ವರ್ಗ ವರ್ಣಗಳ ಹಾವಳಿಯಲ್ಲಿ
ಜಾತಿ ಧರ್ಮದ ಚಕ್ರವ್ಯೂಹದಲಿ
ಮಲ್ಲಿಗೆಯ ಅವಳೆದೆ ಸಿಕ್ಕು
ಬಾಡಿಹೋಗದ ಮುನ್ನ
ಬತ್ತಿಹೋಗದ ಮುನ್ನ
ಹೇಳಕ್ಕ ಹೇಳೆ
ಹುಡುಕಾಡಿ ಕೊಡುಬಾರೆ

ಆತ್ಮಗಂಡನ ಅನ್ವೇಷಣೆಯಲ್ಲಿ ಅಡವಿಯನ್ನೆಲ್ಲಾ ಅಲೆದು ಅಡವಿ, ಮೃಗಗಳ, ಪಕ್ಷಿಗಳ, ಗಿಡಗಂಟಿಗಳ ಜೊತೆ ತನ್ನ ವಿರಹ ವೇದನೆಯನ್ನೆಲ್ಲಾ ನಿವೇದಿಸಿಕೊಳ್ಳುತ್ತಾ ಅಮರತ್ವ ಪಡೆದ ಅಕ್ಕ 'ಸ್ತ್ರೀ' ಚೈತನ್ಯದ ಜೀವಸೆಲೆ. ಪ್ರೀತಿ, ಪ್ರೇಮ-ವೆನ್ನುವುದು ಜಾತಿ, ವರ್ಗ, ವರ್ಣ, ಧರ್ಮಗಳ ತುಳಿತಕ್ಕೆ ಒಳಗಾಗಿದೆ ಇಂದು ನೈಜ ಪ್ರೀತಿ, ಸಾಕ್ಷೀಭೂತಳಾದ ಅಕ್ಕ ಇಲ್ಲಿ ಸ್ತ್ರೀ ಸ್ವಾತಂತ್ರ್ಯದ ಕ್ರಾಂತಿಕಾರಿ ಹೆಣ್ಣಾಗಿ ಕಂಡಿದ್ದಾಳೆ. ಇಲ್ಲಿ ಕವಿ ಅಕ್ಕಮಹಾದೇವಿಯ ಜೊತೆ ಸಂವಾದ ಮಾಡುತ್ತಿರುವ ಹಾಗೆ ಕಾಣುತ್ತಾ ಆತ್ಮೀಯತೆಯನ್ನು ತುಂಬಿಕೊಂಡಿರುವ ಸೋದರಿಯ ಜೊತೆಯೇ ಮಾತನಾಡುತ್ತಿರುವ ಅನುಭವ ಓದುಗನಿಗಾಗುತ್ತದೆ.

ಉನ್ನತ ಜಾತಿಯವರ ಉರಿಗಣ್ಣಿಗೆ ಬಲಿಯಾದ ದಲಿತ ಅಬಲೆಯರು ಕವಿಯ ದೃಷ್ಟಿಯಲ್ಲಿ ಸುರಲೋಕದ ರತಿ ಅಪ್ಸರೆಯರನ್ನು ಮೀರಿಸುವ ಸೌಂದರ್ಯ ಅವರಲ್ಲಿದೆ ಎಂದು ಹೇಳಿದ್ದಾರೆ. ಇಂಥ ರೂಪಸಿಯರ ಹಸಿಮೌವನವನ್ನು ಹುಸಿಮಾತುಗಳಿಂದ ಅಂಗಾಲಿನಿಂದ ನೆತ್ತಿಯ ತನಕ ಸಿಕ್ಕಿ ಋಷಿಪಟ್ಟವರ ಬಗ್ಗೆ ಅಪಾರ ಆಕ್ರೋಶ ವ್ಯಕ್ತವಾಗುತ್ತದೆ.

ಕಟ್ಟಿಕೊಂಡಿರಿ ಜಾತಿಯವಳನ್ನ

ಮಣ್ಣು ಕೊಟ್ಟಿರಿ ಸುಖ ಕೊಟ್ಟುವಳನ್ನು
ಛಲದಿಂದ ಸೇಡಿನಿಂದ ನಾನೇಕೆ ಆಗಬಾರದು
ಬೆಬಿಲೋನಿಯನ್ನ ದೊರೆ ಹಮ್ಮುರಬಿ

ಮೇಲ್ಜಾತಿಯವರ ಕಾಮುಕ ಕಣ್ಣಿಗೆ ಬಲಿಯಾದವರು ದಲಿತ ಹೆಣ್ಣುಗಳು. ಈಗ ನಾವು ದೊರೆ ಹಮ್ಮುರಬಿಯ ' ಸೇಡಿಗೆ ಸೇಡು' 'ತಪ್ಪಿಗೆ ತಪ್ಪು' ಎಂಬುದಾಗಿ ಹೇಳುತ್ತಾ ಕವಿಯ ಹಟವಾದಿತನ ಮತ್ತು ಛಲತ್ವವನ್ನು ಕಾಣಬಹುದು. ಹಾಗೆಯೇ ಅಂತರ್ಜಾತಿ ವಿವಾಹವನ್ನು ಎತ್ತಿ ಹಿಡಿಯುವುದು ಈ ಕವನದ ಆಶಯ.

ವರ್ಣ-ವರ್ಣಗಳ ಕುಸ್ತಿಯಲ್ಲಿ
ಜಯಕಾಗಿ ಸೆಣಸಾಡಿ
ರಾತ್ರೋರಾತ್ರಿ ನೇಣೇರುವ
ಬೆಂಜಾಮಿನ್ ಮೊಲಾಯಿಸರ ಮಧ್ಯೆ ನೀನು
ನೆನಪಾಗುವುದಿಲ್ಲ ಗೆಳತಿ.

ಎಂದು ತೀವ್ರ ವಿಷಾದದಿಂದ ಕವಿ ಹಾಡುತ್ತಾನೆ. ಅವಳ ಉಕ್ಕುವ ಹೃದಯ ಅವನಿಗೆ ಉಮೇದಿಯನ್ನು ತರುವುದಿಲ್ಲ. ಅವಳ ಹೊಳೆಯುವ ಕಣ್ಣುಗಳ ಕಾಂತಿ ಆತನನ್ನು ಕೋರೈಸುವುದಿಲ್ಲ. ಈ ಹೋರಾಟದಲ್ಲಿ ಅವಳು ಮೇನಕೆಯಂತೆ ಕಾಮದ ಗೊಂಬೆಯಾದರೂ ಆತ ವಿಶ್ವಾಮಿತ್ರನಾಗುವುದಿಲ್ಲ. ಏಕೆಂದರೆ ಸ್ವಂತದ ಸುಖಕ್ಕಾಗಿ ಹೋರಾಟದ ಕಾವನ್ನು ತಣ್ಣನೆಗೊಳಿಸುವುದರಲ್ಲಿ ಆತನಿಗೆ ಆಸಕ್ತಿಯಿಲ್ಲ. ವಿಮೋಚನೆಗಾಗಿ ಒದ್ದಾಡುತ್ತಿರುವ ಅನೇಕ ನಿಸ್ಸಹಾಯಕ ಮುಖಗಳು ಅವನ ಗೆಳತಿಯ ಮುಖವನ್ನು ಮಸುಕಾಗಿಸುತ್ತವೆ. ತನ್ನ ಪ್ರೀತಿಯ ಹುಡುಗಿಯನ್ನು ಆತ ಮಣ್ಣಲ್ಲಿ ಬೆರೆತು

ಕ್ರಾಂತ್ಯಾಗಿ ಸಿಡಿದು ತನ್ನಲ್ಲಿ ಒಂದಾಗಲು ಅಹ್ವಾನಿಸುತ್ತಾನೆ. ವರ್ಗ-ವರ್ಣಗಳ ಹಾವಳಿಯಲ್ಲಿ, ಜಾತಿ ಧರ್ಮದ ಚಕ್ರವ್ಯೂಹದಲ್ಲಿ ಮಲ್ಲಿಗೆಯ ಅವಳೆದೆ ಸಿಕ್ಕು ಹೋಗದ ಮುನ್ನ ' ಅಕ್ಕಾ ಅವಳನ್ನು ಹುಡುಕಾಡಿ ಕೊಡಬಾರೆ' ಎಂದು ಅಕ್ಕನನ್ನು ಕೋಳಿಕೊಳ್ಳುತ್ತಾನೆ. ಇತಿಹಾಸದ ಗರ್ಭಕ್ಕೆ ' ಬಿಲ್ಲು ಬಾಣವ ಹೂಡಿ' ಅನ್ಯಾಯಕ್ಕೊಳಗಾದ ಅಬಲೆಯರನ್ನು' ಹದ್ದುಗಳ ಹಾವಳಿ ತಡೆಯೋಣ ಎದೆಮೆಟ್ಟಿ ಎಂಬಂತಹ ಸಾಲುಗಳೆಲ್ಲ ಕವಿಯ ವೈಯಕ್ತಿಕ ಸುಖ-ಸಖಿಯರ ನೆಲೆಯಲ್ಲಿ ನಿಲ್ಲದೆಯೆ ಕ್ರಾಂತಿಗಾಗಿ, ಸ್ತ್ರೀಪರ ನಿಲುವುಗಳಾಗಿ ಮಾರ್ಪಾಡುವುದು ಸತ್ಯಾನಂದರ ಪ್ರೀತಿಯ ಕವಿತೆಗಳ ವಸ್ತುವಾಗಿ ರೂಪುಗೊಂಡದ್ದು ಒಂದು ವಿಶಿಷ್ಟತೆಯನ್ನು ಕಾಯ್ದುಕೊಂಡಿದೆ.

ಪಾತ್ರೋಟರು ಕೇವಲ ದಲಿತರ ನೋವನ್ನಷ್ಟೇ ಕಾವ್ಯಾಗಿಸಿಲ್ಲ ಎನ್ನುವುದಕ್ಕೆ 'ಕಲ್ಲಿಗೂ ಗೊತ್ತಿರುವ ಕತೆ' ಯಲ್ಲಿನ ' ಕಲಕೇರಿ ಕಾವೇರಿ- ಕುರ್ಚಿ ಮತ್ತು ಮಾಯಾನಗರಿ' ಕವನಗಳನ್ನು ನೋಡಬಹುದು ವಾಸ್ತವದ ಜಾಗೃತಿ ಕವಿಯಲ್ಲಿದ್ದರೆ ಆತ ಶಕ್ತ ಕವಿಯಾಗುತ್ತಾನೆ. ಈ ಕೆಲಸವನ್ನು ಪಾತ್ರೋಟರು ಮಾಡಿದ್ದಾರೆ. ಕರ್ನಾಟಕ ಮತ್ತು ತಮಿಳುನಾಡಿನ ನಡುವಣವಿರುವ ಕಾವೇರಿ ನೀರಿನ ಸಮಸ್ಯೆಯನ್ನು ಕವಿ ವಿಡಂಬನಾತ್ಮಕವಾಗಿ ಹೇಳಿದ್ದಾರೆ. ಇದರ ಜೊತೆಗೆ ಇಂದಿನ ರಾಜಕೀಯ ಪ್ರಕ್ಷುಬ್ಧತೆ ಮತ್ತು ರಾಜಕೀಯ ತಂತ್ರಗಾರಿಕೆಯನ್ನು ಹೇಳುತ್ತಾರೆ. ಗದ್ದುಗೆಯನ್ನೇರಲು ನಡೆಸುವ ಕಪಟತನವನ್ನು ಕಟುವಾಗಿ ಟೀಕಿಸಿದ್ದಾರೆ.

ಶ್ರೀಮತಿಯ ಒಲಿಸಲು ದಿಲ್ಲಿಗೆ ಮುತ್ತಿಗೆ
ಸಾಮಾನ್ಯನೇ ವಿಷ್ಣು – ಮಹಾನಿಪುಣ ಮಹಾರಾಜ
ಬನ್ನಿ ಎಂದ – ತಥಾಸ್ತು ಎಂದ – ತಟಸ್ಥನಾದ
ಖುರ್ಚಿಯ ಕೈಮೇಲೆ ಮೃದುವಾಗಿ ಕೈಸವರಿ
ಉರುಳದೆ ಖುರ್ಚಿ
ಉಳಿದರೆ ಸಾಕೆಂದು
ದಕ್ಷಿಣದ ರಾಣಿಗೆ ಕಿವಿ ಜೋತು ಬಿಟ್ಟ
ಕನ್ನಡಿಗರೌದಾರ್ಯಕ್ಕೆ ಬೆಂಕಿಯನೆ ಇಟ್ಟು

ರಾಜಕೀಯ ವ್ಯವಸ್ಥೆಯ ದುರಂತವನ್ನು ಈ ಮೇಲಿನ ಸಾಲುಗಳು ಹೇಳುತ್ತವೆ. ಶ್ರೀಮತಿ ಮತ್ತು ವಿಷ್ಣು- ಇವು ಮಾರ್ಮಿಕ ಅರ್ಥವನ್ನೊಳಗೊಂಡಿವೆ. ಔದಾರ್ಯಕ್ಕೆ ಬೆಲೆಯಿಲ್ಲದ ಈ ದೇಶದಲ್ಲಿ ಕಪಟಕ್ಕೆ ಮಹತ್ವವನ್ನು ಕೊಟ್ಟಿರುವುದು ಸೋಜಿಗವೆನಿಸುತ್ತದೆ. ಈ ಮೇಲಿನ ಸಾಲುಗಳಲ್ಲಿ ತಥಾಸ್ತು- ತಟಸ್ಥ ಉರುಳದೆ- ಉಳಿದರೆ ಎಂಬ ಪ್ರಾಸ ಪದಗಳು ಕಾವ್ಯದ ಅಂದವನ್ನು ಹೆಚ್ಚಿಸಲು ಪೂರಕವಾಗುವಂತೆ ಸಮರ್ಥವಾಗಿ ಕವಿ ಬಳಸಿಕೊಂಡಿದ್ದಾರೆ.

'ಬಾರೋ ಬಾರೋ ಚಂದಿರ' ಕವನದಲ್ಲಿ ಕವಿ ನಿಂತ ನೆಲಕ್ಕೆ ಚಂದಿರನನ್ನು ಕರೆಯುವುದು ಸ್ವಾರಸ್ಯಕರ. ಈ ಜಿಡ್ಡುಗಟ್ಟಿದ

ಸಮಾಜದಲ್ಲಿ ಮನುಷ್ಯ– ಮನುಷ್ಯರಲ್ಲಿ ಅಂತರವಿದೆ. ಬಡತನದಲ್ಲಿ ಬದುಕುವವರು ಬಡತನದಲ್ಲೇ ಉಳಿದಿದ್ದಾರೆ. ಬಲ್ಲಿದರಾದವರು ಬಲ್ಲಿದರಾಗಿಯೇ ಉಳಿದಿದ್ದಾರೆ. ಬಲ್ಲಿದರು ಬೃಹತ್ ಬಂಗಲೆಗಳಲ್ಲಿ ಭವ್ಯ ಜೀವನವನ್ನು ನಡೆಸುತ್ತಿದ್ದಾರೆ. ಜಾತಿ, ಮತ, ಪಂಥಗಳ ವಿಷಬೀಜವನ್ನು ನೆಟ್ಟು ಅಸಮಾನತೆಯನ್ನು ಸೃಷ್ಟಿಸಿ. ದಲಿತರನ್ನು ದೂರೀಕರಿಸುವ ಸಮಾಜದ ಬಗ್ಗೆ ಕವಿಗೆ ಆಕ್ರೋಶವಿದೆ. ಇಂಥ ಆಕ್ರೋಶವನ್ನು ಪ್ರಕೃತಿಯ ಜೊತೆ, ವಿಕೃತಿ ಸಮಾಜದ ಎಲ್ಲಾ ವಿಚಾರಗಳನ್ನು ತೋಡಿಕೊಂಡಿದ್ದಾರೆ. ದೇಶದ ಬೆನ್ನೆಲುಬು ನಾವೇ ಎಂದು ಕವನದಲ್ಲಿ ಹೇಳುತ್ತಾರೆ.

ಗುಡಿಸಲೊಳಗೆ ಕಾಲು ಇಟ್ಟು  
ನೋಡು ಮಹಲಿನೆತ್ತರ  
ಯಾರ ಶ್ರಮದ ಫಲವು ಅದು  
ಅದಕ್ಕೆ ಬಾರೋ ಹತ್ತಿರ  
ಈ ಕವನದಲ್ಲಿ ಕವಿಗೆ ಚಂದಿರ ಸಮಾನತೆಯ ಪ್ರತಿರೂಪವಾಗಿ ಕಂಡು ಬಂದಿದ್ದಾನೆ.  
ನಾವೆಂದರೆ ನೀವು  
ಹೀಗೇಕೆ ನೋಡುತ್ತೀರಿ  
ಕಾಡೆಂದು ಬಗೆಯುತ್ತೀರಿ

ಇಲ್ಲಿ ಕವಿಯಲ್ಲಿರುವ ಸೌಹಾರ್ದಯುತ ಭಾವನೆ ಕಂಡುಬರುತ್ತದೆ. ಕಾಡೆಂದು ಬಗೆಯುತ್ತೀರಿ' ಎನ್ನುವದು ಶ್ಲೇಷೆಯಾಗಿ ಮೂಡಿ ಬಂದಿದೆ. ಕಾಡು–ಅರಣ್ಯ ಎಂದು ಭಾವಿಸಿ ನಮ್ಮನ್ನು ತಿರಸ್ಕರಿಸಬೇಡಿ ಎಂದು ಹೇಳುವುದು ಕವಿಯ ದೃಷ್ಟಿ ಮತ್ತೊಂದು ಪ್ರಕೃತಿಯನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಒಡೆತನವನ್ನು ಸಾಧಿಸಬೇಕೆಂದು ಪ್ರಕೃತಿಯ ದೃಷ್ಟಿಕೋನದಿಂದ ಈ ಕವನದಲ್ಲಿ ವಿಶ್ಲೇಷಿಸಿದರೆ ಪ್ರಕೃತಿ ಮತ್ತು ಮಾನವ ಸಂಬಂಧಗಳನ್ನು ಹೇಳುತ್ತಿರುವ ಹಾಗೆ ಕಂಡುಬರುತ್ತದೆ. ಮನುಷ್ಯ ಪ್ರಯೋಗಶೀಲ ಪ್ರಕೃತಿ ಪರನಾದ್ದರಿಂದ ಮೇಲೆ ಮಾಡಬಾರದ ಕೆಲಸವನ್ನೆಲ್ಲಾ ಮಾಡುತ್ತಾನೆ. ಪ್ರಕೃತಿಯನ್ನು ವಿಕೃತಿಗೊಳಿಸುತ್ತಿದ್ದಾನೆ. ಇದನ್ನು ಕವಿ ಹೀಗೆ ಹೇಳುತ್ತಾರೆ.

ಕಾಡಿದ್ದರೆ ಮಳೆ  
ಮಳೆ ಬಂದರೆ ಬೆಳೆ  
ಒಂದಕ್ಕೊಂದು ಕಳೆ  
ಹಾಗಲ್ಲ ನೀವು  
ನಮ್ಮೊಂದಿಗೆ

ನಿಸರ್ಗವನ್ನು ನಿಗ್ರಹಿಸಿ ಹೊರಟ ಮಾನವನ ಈ ದುಷ್ಕೃತ್ಯವನ್ನು ಪ್ರಕೃತಿಯೇ ನಿವೇದಿಸಿಕೊಳ್ಳುತ್ತಿರುವ ಹಾಗೆ ಕಂಡು ಬರುತ್ತದೆ. ಕಾಡು ಮತ್ತು ದಲಿತರು ಈ ನಾಡಿನ ಆಧಾರಸ್ತಂಭಗಳು. ಹೀಗಿರುವಾಗ ಅಂತರವೇಕೆ ಎಂದು ಹೇಳುವುದು ಕವಿಯ ಪ್ರಮುಖ ಉದ್ದೇಶ.  
ಬಡವನಾದರೇನು ಪ್ರಿಯೆ' ಎನ್ನುವ ಕವನದಲ್ಲಿ ಪ್ರೇಮದ ಸಂಬಂಧವನ್ನು ಕುರಿತು ಹೀಗೆ ಹೇಳುತ್ತಾರೆ.

ಬಡವನಾದರೇನು ಪ್ರಿಯೆ  
ಕೈ–ತುತ್ತು ತಿನಿಸುವೆ  
ಎದೆಯ ತುಂಬ ಒತ್ತಿಕೊಂಡು  
ಮುತ್ತು ಮಳೆಯ ಸುರಿಸುವೆ

ಇದು ಮೇಲು ನೋಟಕ್ಕೆ ಸಾಮಾನ್ಯವೆಂಬುದಾಗಿ ಕಂಡು ಬರುತ್ತದೆ. ಈ ಮೇಲಿನ ಸಾಲುಗಳಲ್ಲಿ ಬಡತನದಲ್ಲಿ ಒಲುಮೆಯೆಂಬುದು ಹೇಗೆ ಸಾಕಾರಗೊಂಡಿರುತ್ತದೆ. ಎಂಬುದನ್ನು ಹೇಳಿದ್ದಾರೆ. ಭುಜಕ್ಕೆ ಭುಜವ ಹಚ್ಚಿನಿಂತು ತೋಳ ಬಂದಿ ತೊಡಿಸುವೆ ಎಂದು ಹೇಳುವಾಗ ಕವಿಗೆ ಹೆಣ್ಣಿನ ಬಗ್ಗೆ ಇರುವ ಅಪಾರವಾದ ಗೌರವ ಗೋಚರವಾಗುತ್ತದೆ. ಈ ಕವನ ಬೇಂದ್ರೆಯವರ ' ನಾನು ಬಡವಿ– ಆತ ಬಡವ' ಎಂಬ ಕವನವನ್ನು ನೆನಪಿಗೆ ತರುತ್ತದೆಯಾದರೂ ಈ ಕವನದ ವೈಶಿಷ್ಟ್ಯವೆಂದರೆ ನೊಂದ ಹೃದಯದಿಂದ ಹೊಮ್ಮಿದ ಪ್ರೀತಿಗೆ ಭಾಷೆಯ ಅಭಿವ್ಯಕ್ತಿಯನ್ನು ಕೊಟ್ಟಿರುವುದು.  
ಹೆಣ್ಣು ಗಂಡಿನ ಚೈನದಾಯಕರು ಹೆಣ್ಣಿನ ಪ್ರೀತಿಯೊಂದಿದ್ದರೆ ಸಾಕು ಏನನ್ನಾದರೂ ಸಾಧಿಸಬಹುದು ಎಂಬುದನ್ನು 'ಕಾಡುತ್ತಾಳೆ ಹುಡುಗಿ' ಎನ್ನುವ ಕವನದಲ್ಲಿ ವ್ಯಕ್ತಪಡಿಸಿದ್ದಾರೆ.

ಎದ್ದೇಳು  
ಈ ಊರು ಆಕೇರಿ  
ಬಿಟ್ಟೆದ್ದು ನಡೆದುಬಿಡು  
ಬಟಾಬಯಲಿನಲಿ  
ಪುರುಷ ಪ್ರಕೃತಿಯಾಗಿ  
ಹೊಸ ಬೀಜ ಬಿತ್ತೋಣ

ಈ ಕವನದ ಸಾಲುಗಳಲ್ಲಿ ಊರು–ಕೇರಿ, ಕಾಲ, ದೇಶ ಎಲ್ಲವನ್ನು ಮೀರುವ ಕ್ರಾಂತಿ ಮಾತ್ರ ಸಾಧ್ಯ ಎಂದು ಕವಿ ಸಾರುತ್ತಾರೆ. ಹೊಸ ವ್ಯವಸ್ಥೆಗೆ ಹಾತೊರೆಯುವ ಮನಸ್ಸು ಕವಿಗಳದು. ಸೂರ್ಯ– ಚಂದ್ರ ಕೈಗೆ ನಿಲುಕಲಾಗದ ಪ್ರಕೃತಿದತ್ತ ವಸ್ತುಗಳು, ಭುವಿ ಮತ್ತು ಆಕಾಶ ಎಲ್ಲಿಗೆಲ್ಲಿಯ ಸಂಬಂಧ, ಇವು ಕವಿಗಳ ದೃಷ್ಟಿಯಲ್ಲಿ ಸಮಾನ, ಆದರೆ ಮಾನವರಲ್ಲಿ ಎಂತಹ ವಿಷಮತೆ ಎಂಬುದನ್ನು ವಿಷದಿಕರಿಸುತ್ತಾ ಒಲುಮೆಯೊಂದೇ ಜೀವನದ ಸಾಕ್ಷಾತ್ಕಾರ ಎಂಬುದನು ಕವಿ ಹೀಗೆ ಹೇಳಿದ್ದಾರೆ.  
ದಲಿತರ ನೋವು ಮತ್ತು ಪರಂಪರೆಯಿಂದ ತುಳಿತಕ್ಕೆ ಒಳಗಾಗಿ ಬದುಕಿದ ದಲಿತರ ದಾರುಣ ಬದುಕನ್ನು ಹೇಳುವ 'ಕರಿಯ ಕಟ್ಟಿದ ಕವನ' ಸಂಕಲನವಾಗಿದೆ. ದುಡಿಮೆಯೊಂದೇ ತಮಗೆ ಸರ್ವಸ್ವವೆಂದು ಬದುಕಿದ ದಲಿತರು  
ದುಡಿತದಲ್ಲೇ ಜೀವನವನ್ನು ಸವೆಸಿದವರು. ಇಂಥ ಜೀತಗಿರಿಯಿಂದ ಮೇಲೇರಲಾಗದರ ಅಡಿಯಲ್ಲೇ ಹೂತುಹೋದ ಮಂದಿಯ ಬದುಕು ಇಲ್ಲ. ಪ್ರತಿಮೆಗಳ ಮೂಲಕ ಅಭಿವ್ಯಕ್ತಿಯನ್ನು ಪಡೆದಿದೆ. 'ಅಪ್ಪ'– ಎನ್ನುವ ಕವನದಲ್ಲಿ ಜೀತದ ಬದುಕಿಗೆ ಒಗ್ಗಿದ ವ್ಯಕ್ತಿ ಜೀವವೊಂದೇ ಮಹತ್ ಎಂದು ಭಾವಿಸಿ ಮರಣ ಹೊಂದಿದ ಘಟನೆ ದಲಿತರ ಬರ್ಬರ ಬದುಕನ್ನು ಈ ಕವನ ತೋರಿಸುತ್ತದೆ. ಅಪ್ಪ ಭೂತಕಾಲದ ವ್ಯಕ್ತಿ. ವರ್ತಮಾನದಲ್ಲೂ ಈ ಜೀತದ ಶೋಷಣೆ ಮುಗಿದಿಲ್ಲ ಎಂಬುದನ್ನು ಕವಿ ವಿಷಾದದಿಂದ

ವಿಶ್ಲೇಷಿಸಿದ್ದಾರೆ.  
ಅವ ಸತ್ತ ದಿನ  
ಯಥಾ ಪ್ರಕಾರ ಸೂರ್ಯ ಹುಟ್ಟಿದ್ದ  
ಟಿಕಾಂವು, ಸಲಕಿ, ಬುಟ್ಟಿ, ಸುತ್ತಿಗೆ, ಉಳಿ, ಇದ್ದಲ್ಲೆ ಇದ್ದವು  
ಇವ ಹೊರಟೇಬಿಟ್ಟಿದ್ದ.

ಸೂರ್ಯ ಪ್ರತಿದಿನದ ದುಡಿಮೆಗೆ ಎಚ್ಚರವನ್ನೀಯುವ ಶಕ್ತಿ. ಟಿಕಾಂವು, ಸಲಕಿ, ಬುಟ್ಟಿ, ಸುತ್ತಿಗೆ, ಉಳಿ – ಇವುಗಳು ಕಾಯಕದ ವಸ್ತುಗಳು, ಇದ್ದಲೇ ಇದ್ದವು ಎಂದು ನಿಲ್ಲುವುದಿಲ್ಲ ಎಂಬ ಕವಿಯ ವಿಷಾದದ ಭಾವನೆ.  
ನವೋದಯ, ನವ್ಯ ಯಾವ ಪಂಥವನ್ನು ಮೆಚ್ಚದೆ ಪ್ರತಿಭಟನೆಯೊಂದೇ ಕಾವ್ಯವೆಂದು ಪರಿಗಣಿಸಿದ ಹಾಗೆ ಕವಿ ಕವನ

ಸಂಕಲನದ ಎಲ್ಲೆಡೆ ಕಂಡು ಬರುತ್ತದೆ. ದಲಿತ ಪಾಡನ್ನೇ ಹಾಡಾಗಿಸುವಾಗ

ನಾ ಬರೆದ ಹಾಡು ನನ್ನವರ ಪಾಡು
ಅಲ್ಲದು ಮುಗಿಲ ಮೊಲ್ಲೆ
ಎದೆಯಾಳದಿಂದ ಹೊರಬಂದ ಮಾತು
ಆಗಿಹುದು ಅರಳು ಮೊಗ್ಗೆ

ಈ ಲೋಕದ ವಾಸ್ತವತೆಗೆ ಒತ್ತನ್ನು ಕೊಟ್ಟು, ಇಹಲೋಕಕ್ಕೆ ಮೀರಿದ ಪರಲೋಕದ ಬಗ್ಗೆ ಕಾಳಜಿ ಕಂಡು ಬರುವುದಿಲ್ಲ. 'ಎದೆಯಾಳದಿಂದ ಹೊರಬಂದ ಮಾತು' ಎಂದು ಹೇಳುವಲ್ಲಿ ಅನುಭವಜನ್ಯ ಅಭಿವ್ಯಕ್ತಿ ಕಾವ್ಯವಾಗಿರುವುದು ಕಂಡು ಬರುತ್ತದೆ.

'ನಾಯಿ' ಎನ್ನುವ ಕವನದಲ್ಲಿ ಇಂದಿನ ರಾಜಕೀಯ ವ್ಯವಸ್ಥೆಯನ್ನು ಅತ್ಯಂತ ವ್ಯಂಗ್ಯವಾಗಿ ಮಾತು ವಿಡಂಬನಾತ್ಮಕವಾಗಿ ಹೇಳುತ್ತಾರೆ. ನಿಯತ್ತಿಗೆ ಸಾಕ್ಷಿಯಾಗಿರುವ ನಾಯಿ ನಿಷ್ಕಲ್ಮಶತೆಯ ಸಾಕಾರವಾಗಿ ಕಂಡುಬಂದಿದೆ. ರಾಜಕಾರಣಿಗಳ ಪಕ್ಷಗಳ ಪಲ್ಲಟವನ್ನು ಕುರಿತು ಕವಿ ಹೀಗೆ ಹೇಳುತ್ತಾರೆ.

ದಿನವೂ ತಾಳುತ್ತಾರೆ ನೂರೆಂಟು ಅವತಾರ
ಮರುಕ್ಷಣವೇ ಮಾಡುತ್ತಾರೆ ಮತಾಂತರ, ಪಕ್ಷಾಂತರ
ಇಲ್ಲ ಯಾವುದರಲ್ಲೂ ಸಂಬಂಧ
ಮಾನವೀಯ ಅನುಬಂಧ

ಮಾನವೀಯತೆಯನ್ನೇ ಮಾಯವಾಗಿಸಿಕೊಂಡಿರುವ ಇಂದಿನ ರಾಜಕೀಯ ವ್ಯವಸ್ಥೆಯನ್ನು ರಾಜಕಾರಣಿಗಳ ಅವಕಾಶವಾದಿತ್ವವನ್ನು ನಿಯತ್ತಿಲ್ಲದ ವ್ಯವಸ್ಥೆ ಮತ್ತು ನಿಯತ್ತಿಲ್ಲದವರು ಎಂದು ಗುರುತಿಸಿ, 'ವಿಚಾರಿಸಿ ಒಂದು ನಿಮಿಷ, ಯಾರು ನಾಯಿ ಯಾರು ಮನುಷ್ಯ' ಎಂದು ಹೇಳಿ ಓದುಗನ ತೀರ್ಮಾನಕ್ಕೆ ಬಿಡುವುದು ಕವನದ ಯಶಸ್ಸಿಗೆ ಕಾರಣವಾಗಿದೆ.

ನೆಲ ಅವರದಂತೆ ಮುಗಿಲವರದಂತೆ
ಹರಿವ ಹೊಳೆ ಹಳ್ಳ ಕೊಳ್ಳ ಬೆಟ್ಟಗಳನ್ನೆಲ್ಲ
ಬರುವಾಗ ಬ್ರಹ್ಮ ಕೊಟ್ಟು ಕಳಿಸಿರುವನಂತೆ
ಆ ಪಾಪಾಸುಕಳ್ಳಿಗಳೆಲ್ಲ
ನನ್ನ ನಿನ್ನ ತಲೆ ಮೇಲೆ
ನೂರ್ಮಡಿಸಿಹವು ನಾ– ನೀ ಕೂಡದ ಹಾಗೆ

ನೆಲ, ಜಲ, ಸಸ್ಯಗಳನ್ನು ಸರ್ವರಿಗೆ ಕೊಟ್ಟ ಗಂಧವತಿ ಪ್ರಕೃತಿ ಅವಳು, ಆದರೆ 'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು' ಎಂಬ ಘೋಷಣೆಯ ಇಂದು ಎಂತಹ ನಗೆಪಾಟಲಿಗೀಡಾಗಿದೆಯೆಂದರೆ ಜಮೀನ್ದಾರೀ ಕ್ರೂರ ವ್ಯವಸ್ಥೆಯಿಂದ ಬಡವ ಬಡವನಾಗುತ್ತಿದ್ದಾನೆ, ಶ್ರೀಮಂತ ಈ ದೇಶವನ್ನು ಆಳುತ್ತಾನೆ ಎಂಬ ಸತ್ಯ ನಮ್ಮ ಕಣ್ಣಿಗೆ ರಾಚುತ್ತದೆ. ಈ ದೇಶದ ನಿರ್ವೀರ್ಯವಾದ ಆಧ್ಯಾತ್ಮ ಬಡವನನ್ನು ಎಂತಹ ದಯನೀಯ ಸ್ಥಿತಿಗಿಳಿಸಿದೆಯೆಂದರೆ–ದೇವರ ಹೆಸರು, ಎರಡು ಹೊತ್ತಿನ ಊಟ, ಅರೆ ಹೊಟ್ಟೆಯಾದರೂ ನಡೆದೀತು ಎಂದವರು ಸಮಾಧಾನ ಪಟ್ಟುಕೊಳ್ಳುತ್ತಾರೆ.ಇಲ್ಲಿ ಚಾರು ಮುಜಮದಾರನಿಗೆ ವಿಷವಿಕ್ಕಿ ಕೊಲ್ಲಲಾಗುತ್ತದೆ.

ಮನದಂಧಕಾರದಲಿ ಯಾರ ಮರೆಯಾಗಿಸಿ
ಯಾರ ಪೂಜೆಗೈವೆ ಗುಟ್ಟಾಗಿ
ನೋಡು ಬಾ ನೀ ದಿಟ್ಟಿಸಿ ನೋಡು
ದೇವಾಲಯದಲ್ಲಿ ನಿನ್ನ ದೇವ ತಾನಿಲ್ಲ!
ಬಿಸಿಲು ಮಳೆ ಚಳಿಗಾಳಿಗಳೊಳು, ಧೂಳಿಡಿದ ಬಟ್ಟೆಯೊಳ
ಒಕ್ಕಲಿಗ ಗಟ್ಟಿನೆಲ ಹೂಡುತಿಹನೆಲ್ಲಿ
ಹಾದಿಗೈತದ ಕೂಲಿ ಕಲ್ಲೊಡೆವನೆಲ್ಲ
ಮಣ್ಣಿಡಿದ ಕೈಗಳಲ್ಲಿ ದೇವನಲ್ಲಿಹನು
ಅವನೊಡನೆನೊಂದಾಗಿ ಕರ್ಮಯೋಗದಿ ತೊಡಗಿ
ಬೆವರ ಹನಿ ಸುರಿಸು ನಿನ್ನಂಗದಿಂದ!

ಈ ಎರಡು ಪದ್ಯಗಳಲ್ಲಿಯೂ ಸಾಕಷ್ಟು ಹೋಲಿಕೆಯಿರುವದನ್ನು ನಾವು ಕಾಣುತ್ತೇವೆ. ಆದರೆ ನಮ್ಮ ಧರ್ಮ ಗುರುಗಳು, ಅಡ್ಡಪಲ್ಲಕ್ಕಿಯಲ್ಲಿ ತಲೆಯ ಮೇಲೆ ಬಂಗಾರದ ಕಿರೀಟವನ್ನಿಟ್ಟುಕೊಂಡು 'ಮಾನವ ಧರ್ಮಕ್ಕೆ ಜಯವಾಗಲಿ' ಎಂದು ಘೋಷಿಸುವವರು, ಮಠದ ಸಂಪತ್ತಿಗಾಗಿ ಬೀದಿ ಜಗಳಕ್ಕಿಳಿಯುವವರು, ತಮ್ಮ ಜಾತಿಯ ಶಾಸಕರನ್ನೇ ಆರಿಸುವಂತೆ ಮಾಡಿ, ಎಂದು ಫರ್ಮಾನು ಹೊರಡಿಸುವವರು ನಮ್ಮೆದುರಿಗೆ ಯಕ್ಷ ಪ್ರಶ್ನೆಯಾಗುವುದಿಲ್ಲ ಪಕ್ಷ ಪ್ರಶ್ನೆಯಾಗುತ್ತಾರೆ. ಇಂಥವರಲ್ಲಿ ಯಾವ ನೀತಿ ಮತ್ತೆಯನ್ನು ಕಾಣಲಾದೀತು? 'ಕಾಯಕವೇ ಕೈಲಾಸ' ಎಂಬುದು ಇವರಿಗೆ ಒಂದು 'ಕಾಯಕ'ವಾಗಿ ಹೋಗಿದೆ.

ಕವಿ ಸತ್ಯಾನಂದ ಪಾತ್ರೋಟರ ಕಾವ್ಯ ಥಟ್ಟನೇ ಎಂದು ತಣ್ಣಗಾಗುವ ಕಾವ್ಯ ಅಲ್ಲ. ಅವರ ಕಾವ್ಯಕ್ಕೆ ಕಲ್ಲಿದ್ದಲಿಯ ಗುಣವಿದೆ. ಅದು ಸಾವಕಾಶ ಹೊತ್ತಿಕೊಂಡು ದೀರ್ಘ ಕಾಲದವರೆಗೆ ಉರಿಯುತ್ತದೆ. ಆದರೆ ಅದು ಅಭಿವ್ಯಕ್ತಿಯಲ್ಲಿ ಘೋಷಣೆಗಳ ಆಕ್ರೋಶದ ಬಿರುನುಡಿಗಳ ಮಟ್ಟಕ್ಕೆ ನಿಲ್ಲುವುದಿಲ್ಲ. ಹೀಗಾಗುವಲ್ಲಿ ಪ್ರಕೃತಿ ಬಹುದೊಡ್ಡ ಸಕಾರಾತ್ಮಕ ಅಂಶವಾಗಿದೆ. ವ್ಯವಸ್ಥೆಯನ್ನು ಸರಿಪಡಿಸುವ, ಬದುಕನ್ನು ಹಸನುಗೊಳಿಸುವ ಮಹದಾಸೆಗೆ ಕಾವ್ಯವು ತೀವ್ರವಾದ – ಕಲಾತ್ಮಕ ತೆರನಲ್ಲಿ ನೆಲೆಯಾಗುತ್ತದೆ. ಮನುಷ್ಯನ ಸ್ವಾರ್ಥ ಸಂಕುಚಿತತೆಗಳಿಗೆ, ಪ್ರಕೃತಿಯ ಬೆಳಕಿನ ಸಿಂಚನ ಆ ಗಿಡದ ನೆರಳಂತೆ ಮರದೊಡಲ ಕರುಳಂತೆ ಬಾಳಿದರೆ ಹೇಗೆಂದು ಕೇಳೋಣ ಬಾ' ಎಂಬ ದಾರಿ ತೋರುತ್ತದೆ. ಹೊಸ ವ್ಯವಸ್ಥೆಯ ಬೇರುಗಳನ್ನು, ಕ್ರಾಂತಿಯ ಬೀಜಗಳನ್ನು ಕವಿ, ಹೂವು ಗಿಡ ಬಳ್ಳಿ ಚಿಗುರುಗಳಲ್ಲಿ ಹುಡುಕುತ್ತಾನೆ. ಬೆಳಕು ಹೊಳೆಯಾಗುವ ಮನುಷ್ಯ ಮರವಾಗುವ, ಹಕ್ಕಿ ಹಾಡಾಗುವ ಸಾಧ್ಯತೆಗಳ ಅನ್ವೇಷಣೆ ನಿಜವಾದ ಬಂಡಾಯಕ್ಕೆ ಸತ್ವ ತುಂಬುವ ಕಾವ್ಯಕ್ಕೆ ಹೊಸ ಶಕ್ತಿ ತುಂಬವ ಮಾರ್ಗವಾಗಿದೆ.

**ಟಿಪ್ಪಣಿಗಳು:**


1. ಸತ್ಯಾನಂದ ಪಾತ್ರೋಟ : ಕಲ್ಲಿಗೂ ಗೊತ್ತಿರುವ ಕತೆ
2. ಸತ್ಯಾನಂದ ಪಾತ್ರೋಟ : ನನ್ನ ಕನಸಿನ ಹುಡುಗಿ
3. ಸತ್ಯಾನಂದ ಪಾತ್ರೋಟ : ಕರಿ ನೆಲದ ಕತೆಗಳು
4. ಸತ್ಯಾನಂದ ಪಾತ್ರೋಟ : ಜಾಜಿ ಮಲ್ಲಿಗೆ
5. ಸತ್ಯಾನಂದ ಪಾತ್ರೋಟ : ನದಿಗೊಂದು ಕನಸ್ಸು ಮತ್ತು ಅವಳು
6. ಸತ್ಯಾನಂದ ಪಾತ್ರೋಟ : ಕರಿಯ ಕಟ್ಟಿದ ಕವನ
7. ಅರ್ಜುನ ಗೊಳಸಂಗಿ : ಹುಸಿ ಇಲ್ಲದ ಗೂಡಿನೊಳಗೆ
8. ಎಲ್.ಎಸ್.ಶೇಷಗಿರಿರಾವ್ : ಸಾಹಿತ್ಯ ಬದುಕು